OS No. 124/2024 PW-2

**<u>ದಿನಾಂಕ 27.03.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಆರ್.ಕೆ ವಕೀಲರಿಂದಃ</u>**

ನಾನು ಗೃಹಿಣಿ. ನಾನು ಮತ್ತು ನನ್ನ ಗಂಡ, ಮಕ್ಕಳು ಮನೆಲಿದ್ದೇವೆ. ಪ್ರತಿವಾದಿ ಪರಿಚಯ. 4-5 ವರ್ಷದಿಂದ ಪರಿಚಯ. ವಾದಿ ಮಗಳಿಗೆ ಕಾಲೇಜು ಸೀಟ್ ಕೊಡಿಸುವಾಗ ಪರಿಚಯವಾದರು. ವಾದಿ ನನಗೆ ಸ್ನೇಹಿತೆ. ವಾದಿ ಮತ್ತು ಪ್ರತಿವಾದಿಯ ನಡುವೆ ನಡೆದ ವ್ಯವಹಾರದ ಸಂಪೂರ್ಣ ಮಾಹಿತಿ ಇದೆ.

ಜನವರಿ 2022 ರಲ್ಲಿ ಕರಾರು ಪತ್ರಕ್ಕೆ ಸಹಿ ಮಾಡಿದ್ದೇನೆ. ಸಾಕ್ಷಿ ಮುಂದುವರೆದು ಇಸವಿ ಸರಿಯಾಗಿ ನೆನಪಿಲ್ಲ ಎಂದು ಹೇಳುತ್ತಾರೆ. 2 ಕರಾರು ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ಸಹಿ ಮಾಡುವಾಗ ಪ್ರತಿವಾದಿ, ವಾದಿ ಇದ್ದೆವು ಮತ್ತು ಮಿಕ್ಕವರು ನೆನಪಿಲ್ಲ. ನಾನು ವಾದಿ ಮನೆಯಲ್ಲಿ ಸಹಿ ಮಾಡಿದ್ದೇನೆ. ಮೊದಲನೇ ಕರಾರು ಪತ್ರ ಆದಾಗ ವಾದಿಯು ಪ್ರತಿವಾದಿಗೆ ರೂ.5,50,000/- ಕೊಟ್ಟಿದ್ದರು. ಅದರ ಮುಖಬೆಲೆ ರೂ.500/- ಆಗಿತ್ತು. ಅದು ಎಷ್ಟು ಕಟ್ಟುಗಳು ಎಂದು ಗೊತ್ತಿಲ್ಲ.

2ನೇ ಕರಾರು ಪತ್ರಕ್ಕೆ ನಾನು ವಾದಿ ಮನೆಯಲ್ಲಿ ಸಹಿಯನ್ನು ಮಾಡಿರುತ್ತೇನೆ. ಆಗ ವಾದಿ, ಪ್ರತಿವಾದಿ, ನಾನು ಇದ್ದೆವು ಮಿಕ್ಕವರು ನೆನಪಿಲ್ಲ. ಈ ಕರಾರುಪತ್ರ ಆದಾಗ ರೂ.20,00,000 ಹಣವನ್ನು ವಾದಿಯು ಪ್ರತಿವಾದಿಗೆ ಕೊಟ್ಟಿರುತ್ತಾರೆ. ನಾನು ಹಣದ ವ್ಯವಹಾರ ಮಾಡುವುದಿಲ್ಲ. ರೂ.20,00,000/- ಹಣವನ್ನು ರೂ.500/- ಮುಖಬೆಲೆಯಲ್ಲಿ ಕೊಟ್ಟಿರುತ್ತಾರೆ. ಅದು ಎಷ್ಟು ಕಟ್ಟುಗಳು ಎಂದು ನೆನಪಿಲ್ಲ. ನಾನು ಹೇಳಿದಂತೆ ವಾದಿಯು ಯಾವುದೇ ಹಣವನ್ನು ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸುಳ್ಳು. ನನ್ನ ಮುಂದೆ ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಸುಳ್ಳು. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸುಳ್ಳು.

ನಾನು ಮತ್ತು ವಾದಿ ಆಸ್ತಿ, ಬಂಗಾರ ಅಡ ಮಾಡಿಕೊಂಡು ಹಣ ಕೊಡುತ್ತೇವೆ ಎಂದರೆ ಸುಳ್ಳು. ಈ ವ್ಯವಹಾರದಲ್ಲಿ ಸ್ವಲ್ಪ ಹಣ ಕೊಟ್ಟು ಖಾಲಿ ಪೇಪರ್ ಗಳನ್ನು ಪಡೆದುಕೊಂಡು ದೊಡ್ಡ ಮಟ್ಟದ ಹಣಕ್ಕೆ ದಾವೆ ಹಾಕುವ ವ್ಯವಹಾರ ಮಾಡುತ್ತೇವೆ ಎಂದರೆ ಸುಳ್ಳು. ವಾದಿ ಹಾಕುವ ದಾವೆಗೆ ನಾನು ಸಾಕ್ಷಿ ಆಗುತ್ತೇನೆ ಮತ್ತು ನಾನು ಹಾಕುವ ದಾವೆ ವಾದಿ ಸಾಕ್ಷಿ ಆಗುವ ಚಟವನ್ನು ಹೊಂದಿದ್ದೇವೆ ಎಂದರೆ ಸುಳ್ಳು.

ನಾನು ಸಿ.ಪಿ.ಐ ವಿರುದ್ದ ದೂರು ನೀಡಿದ್ದೇನೆ ಎಂದರೆ ನಿಜ. ಅದೇ ರೀತಿ ಅಸಹಜ ಲೈಂಗಿಕ ಬಗ್ಗೆ ರೇಖಾ ವಿರುದ್ದ ದೂರು ನೀಡಿದ್ದೇನೆ ಎಂದರೆ ನಿಜ. ಸುಳ್ಳು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಸಮಕ್ಷಮ ಯಾವುದೇ ಕರಾರು ಆಗಿಲ್ಲ ಮತ್ತು ನಾನು ಯಾವುದೇ ಸಹಿ ಮಾಡಿಲ್ಲ ಎಂದರೆ ಸುಳ್ಳು. ನಾನು ಹೇಳಿದಂತೆ ವಾದಿಯಿಂದ ಪ್ರತಿವಾದಿ ಯಾವುದೇ ಹಣವನ್ನು ಪಡೆದಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**